# ಉಚಿತದ ಔಚಿತ್ಯ

ಹೆಣ್ಣು ಮನೆಯಿಂದ ಹೊರಬಂದರೆ ಏನಾಗುತ್ತದೆ? ಈ ಪ್ರಶ್ನೆಗೆ ಸರಳ ಉತ್ತರ: ಗಂಡಿನ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ.

'ಮನೆಯಿಂದ ಹೊರಗೆ ಬರುವುದು' ಎನ್ನುವ ಪ್ರಶ್ನೆಯೇ ಹೆಣ್ಣಿನ ಕುರಿತ ಗಂಡಿನ ಮನೋಧರ್ಮವನ್ನು ಸೂಚಿಸುವಂತಿದೆ. ಮನೆಯಿಂದ ಹೊರಬರುವುದು ಎಂದರೇನು? ಗಂಡಿಗಿಲ್ಲದ ಈ ಪ್ರಶ್ನೆ ಹೆಣ್ಣಿಗೆ ಯಾಕೆ? ಹೀಗೆ ಯೋಚಿಸತೊಡಗಿದರೆ, ಗಂಡಿನ ಹೊಟ್ಟೆಯಲ್ಲಿ ಬೆಂಕಿ ಬೀಳುವುದೇಕೆ ಎನ್ನುವುದು ಅರ್ಥವಾಗುತ್ತದೆ.

'ಗಂಡಿಗೆ ಹೊರಗಿನ ದುಡಿಮೆ, ಹೆಣ್ಣಿಗೆ ಒಳಗಿನ ದುಡಿಮೆ' ಎನ್ನುವುದು ಭಾರತೀಯ ಕುಟುಂಬ ವ್ಯವಸ್ಥೆ ನಂಬಿಕೊಂಡು ಬಂದಿರುವ ಮೌಢ್ಯಗಳಲ್ಲೊಂದು. ಹೆಣ್ಣನ್ನು ಮನೆಯೊಳಗೆ ಇರಿಸುವ ಮೂಲಕ ಕೌಟುಂಬಿಕ ಜವಾಬ್ದಾರಿಗಳಿಂದ ನುಣುಚಿಕೊಳ್ಳುವ ಗಂಡಿನ ಬಯಕೆಯೇ ಈ ಮೌಢ್ಯದ ಬೀಜ.

ಹೊರಬರುವುದೆಂದರೇನು? ಅರಿವಿಗೆ ತೆರೆದುಕೊಳ್ಳುವುದು, ಹೊಸ ಲೋಕದರ್ಶನಗಳ ಅರಿಯುವುದು. 'ದೇಶ ಸುತ್ತು ಕೋಶ ಓದು' ಎನ್ನುತ್ತದೊಂದು ಗಾದೆ. ಲೋಕ ಸುತ್ತುವುದು ಅರಿವಿನ ದಾರಿ ಎಂದು ಯಾವ ಅನುಭವವಿವೇಕ ಹೇಳುತ್ತದೆಯೋ, ಅದೇ ಮನಸ್ಸು 'ಗಂಡು ಕೂತು ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು' ಎಂದೂ ಹೇಳಿದೆ. ಹಾಗೆ ಹೇಳುವ ಮೂಲಕ, ಅರಿವಿನ ದಾರಿಗಳನ್ನು ಮಹಿಳೆಗೆ ನಿರ್ಬಂಧಿಸಿದೆ ಅಥವಾ ಹೆಣ್ಣಿಗೆ ಅರಿವಿನ ಅಗತ್ಯವಿಲ್ಲ ಎಂದು ಭಾವಿಸಿದೆ.

ಗೃಹಕೃತ್ಯದ ಹೆಸರಿನಲ್ಲಿ ಅಡುಗೆ, ತೊಳಿ ಬಳಿಯುವಂಥ ಕೆಲಸಗಳೆಲ್ಲ ಹೆಣ್ಣಿನ ಹೆಗಲೇರಿವೆ. ಮಕ್ಕಳ ಲಾಲನೆ ಪಾಲನೆಗೆ, ಇಡೀ ಕುಟುಂಬದ ಹೊಣೆಗಾರಿಕೆಗೆ ಹೆಣ್ಣು ಹೆಗಲು ಕೊಡಬೇಕಾಗಿದೆ. ಮನೆ–ಮನೆಮಂದಿಯಷ್ಟೇ 'ಅವಳ ಜಗತ್ತು' ಆಗುವುದರೊಂದಿಗೆ, ಹೊರಗೆ ಮತ್ತೊಂದು ಜಗತ್ತಿದೆ ಎನ್ನುವುದೇ ಆಕೆಗೆ ಮರೆತುಹೋಗಿದೆ. ಹೀಗೆ, ಹೆಣ್ಣನ್ನು ಮನೆಯ ಚೌಕಟ್ಟಿನಲ್ಲಿರಿಸಿರುವ ಗಂಡು, ಹೊರಗಿನ ದುಡಿಮೆಯನ್ನೆಲ್ಲ ಒಂಟಿಯಾಗಿ ನಿಭಾಯಿಸುತ್ತಾನೆಯೆ? ಕೃಷಿಜಗತ್ತನ್ನು ಗಮನಿಸಿ: ಉಳುಮೆ ಬಿತ್ತನೆ ಕೊಯ್ಲಿನಲ್ಲಿ ಗಂಡಿನಂತೆ ಹೆಣ್ಣೂ ಬೆವರು ಸುರಿಸುತ್ತಾಳೆ. ಆದರೆ, ಕಟಾವಿನ ನಂತರದ ಮಾರುಕಟ್ಟೆ ವ್ಯವಹಾರವೆಲ್ಲ ಗಂಡಿಗೆ ಸೇರಿದ್ದು. 'ಅನ್ನದಾತ' ಎಂದು ಬಣ್ಣಿಸುವಾಗ ಕಣ್ಣೆದುರಿಗೆ ಬರುವುದು ಗಂಡಿನ ಚಿತ್ರವೇ. 'ನೇಗಿಲಯೋಗಿ' ಹೆಣ್ಣಾಗಿರುವುದು ಸಾಧ್ಯವಿಲ್ಲ. ಕೃಷಿರಂಗದಲ್ಲಿ ಹೆಣ್ಣಿಗೆ ನೇಪಥ್ಯದಲ್ಲಷ್ಟೇ ಸ್ಥಾನ. ಆಧುನಿಕ ಸಂದರ್ಭ ಗಮನಿಸಿದರೆ, ಹೆಣ್ಣುಮಕ್ಕಳ ರುಜುವಿಲ್ಲದ ಕ್ಷೇತ್ರವೇ ಇಲ್ಲ ಎನ್ನುವಂತಿದೆ ಈಗಿನ ಸ್ಥಿತಿ. ಹೆಣ್ಣು ಮನೆಯಿಂದ ಹೊರಗೆ ಬಂದು ದುಡಿಯುತ್ತಿರುವುದನ್ನು ನೋಡಿದರೆ, ಮನೆಯ ಚೌಕಟ್ಟಿನಿಂದ ಆಕೆ ಹೊರಬಂದಿದ್ದಾಳೆ ಎನ್ನಿಸುತ್ತದೆ. ಇಲ್ಲೊಂದು ವೈರುಧ್ಯ ಗಮನಿಸಬೇಕು. ದುಡಿಮೆಯ ಕಾರಣಕ್ಕಾಗಿ ಹೆಣ್ಣು ಹೊರಗೆ ಬಂದರೆ ಆಕ್ಷೇಪಿಸುವ ಗಂಡಸರು ಕಡಿಮೆ. ಹೂಗಳ ಮಾರುವ ಹೂವಾಡಗಿತ್ತಿ, ಮನೆ ನಿರ್ಮಾಣದಲ್ಲಿ ಇಟ್ಟಿಗೆ ಎತ್ತುವ ಗಟ್ಟಿಗಿತ್ತಿ, ಬೀದಿಗಳ ಕಸ ಬಳಿಯುವ ಜಾಡಮಾಲಿ ತಾಯಿ, ರೋಗಿಗಳ ನೋವನ್ನು ನಗೆಯಲ್ಲೇ ಶಮನಗೊಳಿಸುವಂತೆ ಕಾಣಿಸುವ ದಾದಿ, ದಣಿವರಿಯದೆ ದುಡಿಯುವ ಅಧಿಕಾರಿಣಿ – 'ದುಡಿಯುವ ವರ್ಗ'ದ ಮಹಿಳೆಯರ ಸಂಖ್ಯೆ ಸಾಕಷ್ಟಿದೆ. ಇವರ ದುಡಿಮೆಯನ್ನು ಕುಟುಂಬ–ಸಮಾಜ ಒಪ್ಪಿಕೊಂಡಿದೆ. ಸಮಸ್ಯೆ ಇರುವುದು, ದುಡಿಮೆಯ ಹೊರತಾಗಿ ಆಕೆ ಮನೆಯಿಂದ ಹೊರಗೆ ಬರುವುದು ಪ್ರಶ್ನಾರ್ಹ ಆಗಿರುವುದರಲ್ಲಿ.

ಯಾವ ಕಾರಣವೂ ಇಲ್ಲದೆ ಮನೆಯಿಂದ ಹೊರಗೆ ಬರುವುದು ಗಂಡಿಗೆ ಸುಲಭ. ಹೆಣ್ಣಿನ ಪರಿಸ್ಥಿತಿ ಭಿನ್ನವಾದುದು. ಆಕೆ ಮನೆಯಿಂದ ಹೊರಗೆ ಹೆಜ್ಜೆಯಿಡುವುದಕ್ಕೆ ಮೊದಲು, 'ಏನು ಕೆಲಸ?' ಎನ್ನುವುದನ್ನು ಹಲವರಿಗೆ ಸ್ಪಷ್ಟಪಡಿಸಬೇಕಾಗುತ್ತದೆ. ಗಂಡಿನ ಜೊತೆಯಿಲ್ಲದೆ, ವಿನಾಕಾರಣ ಮನೆಯಿಂದ ಹೊರಗೆ ಬರುವ ಹೆಣ್ಣು ಸಮಾಜದ ಕಣ್ಣಿಗೆ ಕೇವಲವಾಗಿ ಕಾಣಿಸುತ್ತಾಳೆ. ಮನೆಯ ಚೌಕಟ್ಟಿನಿಂದ ಹೊರಗೆ ಓಡಾಡುವುದು ಹೆಣ್ಣಿಗೆ ಸುರಕ್ಷಿತವಲ್ಲ ಎನ್ನುವುದು ಇನ್ನೊಂದು ಮೂಢನಂಬಿಕೆ. ಹೆಣ್ಣಿನ ಓಡಾಟದಿಂದ ನಿಜಕ್ಕೂ ಅಸುರಕ್ಷಿತ ಭಾವನೆ ಅನುಭವಿಸುವುದು ಅವಳನ್ನು ಮನೆಯ ಪರಿಧಿಯಲ್ಲಿಡಬಯಸುವ ಗಂಡೇ. ಹೆಣ್ಣನ್ನು ಮನೆಯ ಚೌಕಟ್ಟಿನಲ್ಲೇ ಇರಿಸುವುದರಲ್ಲಿ ಗಂಡಿನ ಸೌಖ್ಯವಿದೆ. ಮನೆಯ ಸೌಖ್ಯವನ್ನು ನೋಡಿಕೊಳ್ಳುವುದರಲ್ಲಿ ಹೆಣ್ಣಿನ ಸೌಖ್ಯವಿದೆ ಎನ್ನುವುದು ಗಂಡು ರೂಪಿಸಿರುವ ಮತ್ತೊಂದು ಮೌಢ್ಯ. ಈ ಮೌಢ್ಯಕ್ಕೆ ಕರ್ನಾಟಕ ಸರ್ಕಾರದ 'ಶಕ್ತಿ' ಯೋಜನೆ ಸವಾಲೆಸೆಯುವಂತಿದೆ.

ಸರ್ಕಾರಿ ಬಸ್ಸುಗಳಲ್ಲಿ ಹೆಣ್ಣುಮಕ್ಕಳಿಗೆ ಉಚಿತ ಪ್ರಯಾಣದ ಅವಕಾಶವನ್ನು 'ಶಕ್ತಿ' ಯೋಜನೆ ಕಲ್ಪಿಸಿದೆ. ಉಚಿತ ಎನ್ನುವ ಶಬ್ದಕ್ಕೆ 'ಬಿಟ್ಟಿ', 'ಕಾಣಿಕೆ', 'ಪುಗಸಟ್ಟೆ' ಎನ್ನುವ ಅರ್ಥಗಳಿರುವಂತೆಯೇ, 'ಔಚಿತ್ಯ', 'ಸರಿಯಾದ', 'ಸುಖಕರವಾದ', 'ಚೆನ್ನಾಗಿ ತಿಳಿದಿರುವ', 'ಸಂದರ್ಭಕ್ಕೆ ತಕ್ಕ ರೀತಿ' ಎನ್ನುವ ನಿಘಂಟು ಅರ್ಥಗಳೂ ಇವೆ. ಈ ಅರ್ಥಗಳಲ್ಲಿ ಯಾವುದನ್ನು 'ಶಕ್ತಿ' ಯೋಜನೆಗೆ ಹಚ್ಚುತ್ತೇವೆ ಎನ್ನುವುದು ನಮ್ಮ ಮನಸ್ಥಿತಿಯ ಆರೋಗ್ಯದ ಕನ್ನಡಿಯಾಗಿರುತ್ತದೆ.

ಹೆಣ್ಣುಮಕ್ಕಳಿಗೆ ದೊರೆತಿರುವ ಪ್ರಯಾಣ ಸೌಲಭ್ಯವನ್ನು 'ಉಚಿತ'ವೆಂದು ನೋಡದೆ, 'ಸಮರ್ಪಕ' ಎನ್ನುವ ಅರ್ಥದಲ್ಲಿ ನೋಡುವುದೇ ಯಥೋಚಿತವಾದುದು. 'ಚೆನ್ನಾಗಿ ತಿಳಿದಿರುವ' ಎನ್ನುವ ಅರ್ಥವಂತೂ 'ಶಕ್ತಿ' ಯೋಜನೆಯ ಆಶಯಕ್ಕೆ ಬಹು ಸೊಗಸಾಗಿ ಹೊಂದುವಂತಿದೆ. ಈವರೆಗೆ ಬೇರೆ ಬೇರೆ ಕಾರಣಗಳಿಂದ ಮನೆಯ ಚೌಕಟ್ಟಿನಲ್ಲೇ ಉಳಿದ ಹೆಣ್ಣುಮಕ್ಕಳು, ಸರ್ಕಾರದ ಸೌಲಭ್ಯದ ಕಾರಣದಿಂದಲಾದರೂ ಬಯಲಿನ ಗಾಳಿಬೆಳಕಿಗೆ ಬರುವಂತಾದರೆ, ಅದು ಹಲವು ಅಡೆತಡೆಗಳಿಂದ ಅವರನ್ನು 'ಮುಕ್ತ'ಗೊಳಿಸಿದಂತಾಗುತ್ತದೆ; ಹೀಗೆ ಹೆಣ್ಣುಮಕ್ಕಳು ಹೊರಬರುವುದು ಸಮಾಜದ ಆರೋಗ್ಯಕ್ಕೂ ಉಚಿತವಾದುದು.

ಬಸ್ ಪ್ರಯಾಣ ಶುಲ್ಕರಹಿತವಾದುದರಿಂದ ಮಹಿಳೆಯರು ಹೆಚ್ಚು ಸಂಚರಿಸುತ್ತಾರೆ, ವಿನಾಕಾರಣ ಪ್ರಯಾಣಿಸುತ್ತಾರೆ ಎನ್ನುವುದು 'ಶಕ್ತಿ' ಯೋಜನೆಯ ಬಗ್ಗೆ ಅಸಮಾಧಾನ ಹೊಂದಿರುವವರ ದೂರು. ಹೆಣ್ಣುಮಕ್ಕಳು ಹೆಚ್ಚು ಓಡಾಡುವುದರಿಂದ ತೊಂದರೆಯೇನು? ಗೃಹಕೃತ್ಯಗಳು ಏರುಪೇರಾಗುತ್ತವೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆಗಲಿ ಬಿಡಿ. ಹೆಣ್ಣಿನ ನೆರಳಿನಿಂದ ಹೊರಬಂದು, ಗಂಡು ಸ್ವಾವಲಂಬಿಯಾಗಲಿಕ್ಕೆ 'ಶಕ್ತಿ' ಯೋಜನೆಯನ್ನು ಶಕ್ತಿಮದ್ದೆಂದು ಯಾಕೆ ತಿಳಿಯಬಾರದು?

■ **ಚಂಪಕಮಾಲಾ**

## ಮಾತೇ ಮುತ್ತು

- ಅಪ್ರಿಯವಾದರೂ ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.

  –ಅ.ನ.ಕೃ.

- ನಿಮಗೆ ಯಾವುದಾದರೂ ಒಂದು ಕೆಲಸವನ್ನು ಮಾಡಲು ಮೋಟಿವೇಷನ್ ಬೇಕಾದರೆ ಆ ಕೆಲಸವನ್ನು ಮಾಡಬೇಡಿ.

  –ಎಲಾನ್ ಮಸ್ಕ್

- ನಮ್ಮ ಹಣೆಬರಹವನ್ನು ನಿರ್ಧರಿಸುವ ಜವಾಬ್ದಾರಿ ನಕ್ಷತ್ರಗಳ ಮೇಲಿಲ್ಲ. ಅದು ನಮ್ಮ ಮೇಲೆನೇ ಇದೆ.

  –ಶೇಕ್ಸ್‌ಪಿಯರ್

- ಕಿವಿಕೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.

  –ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಇಬ್ಬರು ಮೂರ್ಖರು ಸೇರಿಕೊಂಡು ಒಬ್ಬ ಶಕ್ತಿಶಾಲಿಯನ್ನು ಸೋಲಿಸುವುದು ಪ್ರಜಾಪ್ರಭುತ್ವ.

  –ಅಟಲ್ ಬಿಹಾರಿ ವಾಜಪೇಯಿ

- ಆತ್ಮಶ್ರದ್ಧೆ ಇಲ್ಲದವರು ಭಗವಂತನಲ್ಲಿ ಶ್ರದ್ಧೆ ಹೊಂದರಲು ಸಾಧ್ಯವಿಲ್ಲ.

  –ಗುರುನಾನಕ್

- ಅಜ್ಞಾನಿಗಳೊಡನೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳೊಡನೆ ಜಗಳವಾಡುವುದು ಲೇಸು.

  –ಕನಕದಾಸ

- ನಮ್ಮ ಕೆಟ್ಟ ಆಲೋಚನೆಗಳು ಉಂಟುಮಾಡುವ ಹಾನಿ, ನಮ್ಮ ಕಡು ಶತ್ರುಗಳು ತಂದೊಡ್ಡುವ ಕೇಡಿಗಿಂತಲೂ ಘೋರ ಅಪಾಯವನ್ನು ಉಂಟುಮಾಡುತ್ತದೆ.

  –ಗೌತಮ ಬುದ್ಧ